ವಿಜಾಪುರ ಕ್ಷೇತ್ರದಲ್ಲಿ ವಿದ್ಯುತ್ ಲೋ-ವೋಲ್ಟೇಜ್ ಸಮಸ್ಯೆ

1800 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) *ಬಿಜಾಪುರ ವಿಧಾನ ಸಭೆ ವ್ಯಾಪ್ತಿಯಲ್ಲಿ ಬರುವ ಶಿವಣಗಿ ಶಾಖೆಯಲ್ಲಿ ಬರುವ ಹಳ್ಳಿಗಳಿಗೆ ಲೋ-ವೋಲ್ಟೇಜ್ ಸಮಸ್ಯೆಯಿಂದ ರೈತರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಲೋ-ವೋಲ್ಟೇಜ್ ಸಮಸ್ಯೆ ನೀಗಿಸಲು ಈ ಪ್ರದೇಶದ ಮಧ್ಯದ ಹಳ್ಳಿಯಾದ ಹೊನ್ನುಟಗಿ ಗ್ರಾಮದ ಹತ್ತಿರ 33:11 ಕೆ.ವಿ. ವಿತರಣಾ ಕೇಂದ್ರ ಸ್ಥಾಪಿಸಿ ಸಮಸ್ಯೆ ಪರಿಹರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಇ) *ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು! ಹಾಗೂ ಎಂದು ಮುಗಿಸಲಾಗುವುದು?*

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಬಿಜಾಪುರ ತಾಲ್ಲೂಕಿನ ಶಿವಣಗಿ ಶಾಖೆಯಲ್ಲಿ ಬರುವ ಹಳ್ಳಿಗಳಿಗೆ ಈ ಮೊದಲು ಲೋ-ವೋಲ್ಟೇಜ್ ಸಮಸ್ಯೆ ಇತ್ತು. ಈ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ 110 ಕೆ.ವಿ. ಬಿಜಾಪುರ ಇಂಡಸ್ಟ್ರೀಯಲ್ ಸ್ಟೇಷನ್ನಿನಿಂದ ಶಿವಣಗಿ ಲೈನಿಗೆ 6.5ಕಿ.ಮೀ. ಉದ್ದದ 11 ಕೆ.ವಿ. ಲಿಂಕ್ ಲೈನನ್ನು ರೂ. 5,44,335-00 ಅಂದಾಜು ವೆಚ್ಚದಲ್ಲಿ ಎಳೆಯಲಾಗಿದ್ದು, ಈಗ ಸದರೀ ಪ್ರದೇಶದಲ್ಲಿ ಕಡಿಮೆ ವೋಲ್ಟೇಜ್ ಸಮಸ್ಯೆ ಇರುವುದಿಲ್ಲ.

ಆ) ಹೊನ್ನುಟಗಿ ಗ್ರಾಮದಲ್ಲಿ 33:11 ಕೆ.ವಿ.ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಿರುವ ಬಗ್ಗೆ ಪ್ರಸ್ತಾವನೆಯು ಸದ್ಯಕ್ಕೆ ಮಂಡಳಿಯ ಮುಂದಿರುವುದಿಲ್ಲ.

ಇ) ಪ್ರಶ್ನೆಯ 'ಆ' ಭಾಗಕ್ಕೆ ನೀಡಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಬೆಂಗಳೂರು ನಗರದ ಬಡಾವಣೆಗಳಲ್ಲಿ ವಿದ್ಯುತ್ ಹಾಗೂ ದೂರವಾಣಿ ಕಂಬಗಳಿಗೆ ಹಸುಗಳನ್ನು ಕಟ್ಟುವುದು.

1801 - ಶ್ರೀ ಹೆಚ್.ಡಿ. ಬಸವರಾಜ್ (ವೀರಾಜಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ ಲಾಲ್‌ಬಾಗ್ ಸಿದ್ಧಾಪುರ ಬಡಾವಣೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿಗೃಹಗಳ ಬ್ಲಾಕ್ 5ರ ಮುಂದೆ ರಸ್ತೆಗಳಲ್ಲಿ ಇರುವ ವಿದ್ಯುತ್ ಹಾಗೂ ದೂರವಾಣಿ ಕಂಬಗಳಿಗೆ ಹಸುಗಳನ್ನು ಕಟ್ಟುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*